ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001

ಸಂಖ್ಯೆ: ಸಿ4(7).ಸ.ಪ್ರೌ.ಶಾ.ಶಿ.ವರ್ಗಾ 17/2021-22 ದಿನಾಂಕ: 19.01.2022

**: ಕೌನ್ಸಿಲಿಂಗ್ ವೇಳಾಪಟ್ಟಿ :**

ವಿಷಯ: 2020-21ನೇ ಸಾಲಿನ ಅಂತರ್ ಘಟಕ ವಿಭಾಗದ ಹೊರಗಿನ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಕೋರಿಕೆ/ಪರಸ್ಪರ ವರ್ಗಾವಣೆಯನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವ ವೇಳಾಪಟ್ಟಿ ಕುರಿತು.

ಉಲ್ಲೇಖ:1. ಈ ಕಛೇರಿಯ ಜ್ಞಾಪನ ಸಂಖ್ಯೆ: ಶಿ.ವ.ಕೋಶ.ಸಾ.ವ/01/2020-21 ದಿನಾಂಕ: 25/11/2021.

2. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2020 ರ ಸಂಖ್ಯೆ: ಇಪಿ 08/ಇಟಿಆರ್ 2020 ದಿನಾಂಕ: 09/07/2020.

3. ಈ ಕಛೇರಿಯ ಜ್ಞಾಪನ ಸಂಖ್ಯೆ: ಶಿ.ವ.ಕೋಶ.ಸಾ.ವ/01/2020-21 ದಿನಾಂಕ: 19/01/2022.

------******------

ವಿಷಯದನ್ವಯ 2020-21ನೇ ಸಾಲಿನ ಅಂತರ್ ಘಟಕ ವಿಭಾಗದ ಹೊರಗಿನ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಕೋರಿಕೆ/ಪರಸ್ಪರ ಸಾಮಾನ್ಯ ವರ್ಗಾವಣೆಯನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಹಮ್ಮಿಕೊಳ್ಳಲು ಉಲ್ಲೇಖ (3) ರಲ್ಲಿ ಪರಿಷ್ಕೃತ ವೇಳಾಪಟ್ಟಿಯನ್ನು ಹೊರಡಿಸಿದೆ. ಅದರಂತೆ ದಿನಾಂಕ: 11/11/2020 ರ ಅಧಿಸೂಚನೆಯನುಸಾರ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಅಂತರ್ ಘಟಕ ವಿಭಾಗದ ಹೊರಗಿನ ಸರ್ಕಾರಿ ಪ್ರೌಢ ಶಾಲಾ ಸಹಶಿಕ್ಷಕರು/ದೈಹಿಕ ಶಿಕ್ಷಕರು/ವಿಶೇಷ ಶಿಕ್ಷಕರುಗಳ ಕೋರಿಕೆ ಹಾಗೂ ಪರಸ್ಪರ ವರ್ಗಾವಣೆ ಕೌನ್ಸಿಲಿಂಗ್‌ನ್ನು ದಿನಾಂಕ:24-01-2022 ರಿಂದ ದಿನಾಂಕ: 03-02-2022 ರವರೆಗೆ ಈ ಕೆಳಕಂಡ ವೇಳಾಪಟ್ಟಿಯಂತೆ **ಜೂಮ್ ಸಭೆಯ ಮೂಲಕ ವರ್ಚುಯಲ್‌ನಲ್ಲಿ ನಡೆಸಲಾಗುವುದು**. ಅಂತಿಮ ಆಧ್ಯತಾ ಕೌನ್ಸಿಲಿಂಗ್ ಪಟ್ಟಿಯನ್ನು ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ಈಗಾಗಲೇ ಇಲಾಖಾ ವೆಬ್-ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅಂತಿಮ ಆಧ್ಯತಾ ಕೌನ್ಸಿಲಿಂಗ್ ಪಟ್ಟಿಯಲ್ಲಿನ ಶಿಕ್ಷಕರು ನಿಗಧಿತ ದಿನಾಂಕ ಹಾಗೂ ಸಮಯಕ್ಕೆ ಮೂಲ ಅರ್ಜಿ ಹಾಗೂ ಕೋರಿರುವ ಆಧ್ಯತೆಯ ಮೂಲ ದಾಖಲೆಗಳೊಂದಿಗೆ ಅದೇ ಜಿಲ್ಲೆಯ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ತಿಳಿಸಿದೆ.

**ಅಂತರ್ ಘಟಕ-ವಿಭಾಗದ ಹೊರಗಿನ ಕೋರಿಕೆ ವರ್ಗಾವಣೆಯ ಕೌನ್ಸಿಲಿಂಗ್ ವೇಳಾಪಟ್ಟಿ. (as on 11/11/2020)**

ಸರ್ಕಾರಿ ಪ್ರೌಢ ಶಾಲಾ ಸಹಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು, ವಿಶೇಷ ಶಿಕ್ಷಕರು,

| ಕ್ರ.ಸಂ | ದಿನಾಂಕ | ಸಮಯ | ಹುದ್ದೆಯ ವಿವರ | ಆಧ್ಯತಾ ಕ್ರಮ ಸಂಖ್ಯೆ ಯಿಂದ – ರವರೆಗೆ | ಷರಾ |
|---|---|---|---|---|---|
| 1 | 24-01-2022 | ಬೆಳಗ್ಗೆ 10-00 ರಿಂದ | ಸಹ ಶಿಕ್ಷಕರು | 01 – 150 | 150 ಅರ್ಜಿಗಳು |
| 2 | 25-01-2022 | ಬೆಳಗ್ಗೆ 10-00 ರಿಂದ | ಸಹ ಶಿಕ್ಷಕರು | 151 – 300 | 150 ಅರ್ಜಿಗಳು |
| 3 | 27-01-2022 | ಬೆಳಗ್ಗೆ 10-00 ರಿಂದ | ಸಹ ಶಿಕ್ಷಕರು | 301 – 500 | 200 ಅರ್ಜಿಗಳು |
| 4 | 28-01-2022 | ಬೆಳಗ್ಗೆ 10-00 ರಿಂದ | ಸಹ ಶಿಕ್ಷಕರು | 501 – 700 | 200 ಅರ್ಜಿಗಳು |
| 5 | 31-01-2022 | ಬೆಳಗ್ಗೆ 10-00 ರಿಂದ | ಸಹ ಶಿಕ್ಷಕರು | 701 – 900 | 200 ಅರ್ಜಿಗಳು |
| 6 | 01-02-2022 | ಬೆಳಗ್ಗೆ 10-00 ರಿಂದ | ಸಹ ಶಿಕ್ಷಕರು | 901 – 1164 | 264 ಅರ್ಜಿಗಳು |
| 7 | 02-02-2022 | ಬೆಳಗ್ಗೆ 09-00 ರಿಂದ<br>ಮದ್ಯಾಹ್ನ 02-00 ರಿಂದ | ದೈಹಿಕ ಶಿಕ್ಷಕರು<br>ವಿಶೇಷ ಶಿಕ್ಷಕರು | 01 – 196<br>01 – 124 | 196 ಅರ್ಜಿಗಳು<br>124 ಅರ್ಜಿಗಳು |

**ಅಂತರ್ ಘಟಕ-ವಿಭಾಗದ ಹೊರಗಿನ ಪ್ರೌಢ ಶಾಲಾ ಶಿಕ್ಷಕರ ಪರಸ್ಪರ ವರ್ಗಾವಣೆ (as on 11/11/2020)**

| ಕ್ರ.ಸಂ | ದಿನಾಂಕ | ಸಮಯ | ಹುದ್ದೆಯ ವಿವರ | ಆಧ್ಯತಾ ಕ್ರಮ ಸಂಖ್ಯೆ ಯಿಂದ – ರವರೆಗೆ | ಷರಾ |
|---|---|---|---|---|---|
| 1 | 03-02-2022 | ಬೆಳಗ್ಗೆ 10-00 ರಿಂದ | ಸಹಶಿಕ್ಷಕರು<br>ದೈಹಿಕ ಶಿಕ್ಷಕರು<br>ವಿಶೇಷ ಶಿಕ್ಷಕರು | 01 – 10<br>01 – 01<br>01 – 01 | 12 ಅರ್ಜಿಗಳು |

2

**ಮೇಲಿನ ವೇಳಾಪಟ್ಟಿಯಂತೆ ಅಂತರ್ ಘಟಕ-ವಿಭಾಗದ ಹೊರಗಿನ ಪ್ರೌಢ ಶಾಲಾ ಶಿಕ್ಷಕರ ಕೋರಿಕೆ/ಪರಸ್ಪರ ವರ್ಗಾವಣೆಯ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಜೂಮ್ ಸಭೆಯ ಮೂಲಕ ವರ್ಚುಯಲ್‌ನಲ್ಲಿ ನಡೆಸುತ್ತಿರುವುದರಿಂದ ಸಂಬಂದಿಸದ ಅಭ್ಯರ್ಥಿಗಳು ಅದೇ ಜಿಲ್ಲೆಯ ಉಪನಿರ್ದೇಶಕರ ಕಛೇರಿಯಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗುವುದು.**

**ವಿಶೇಷ ಸೂಚನೆ:**

1. ಕೌನ್ಸಿಲಿಂಗ್ ಅರ್ಹತಾ ಪಟ್ಟಿಯಲ್ಲಿರುವ ಶಿಕ್ಷಕರು ಮಾತ್ರ ಆಧ್ಯತಾ ಪಟ್ಟಿಯಲ್ಲಿನ ಕ್ರಮ ಸಂಖ್ಯೆಯಂತೆ ನಿಗಧಿಪಡಿಸಿದ ದಿನಾಂಕಗಳಂದು ವೇಳಾಪಟ್ಟಿಯಲ್ಲಿ ತಿಳಿಸಿರುವಂತೆ ನಿಗಧಿತ ಸಮಯಕ್ಕೆ ಕೌನ್ಸಿಲಿಂಗ್‌ಗೆ ಸಂಬಂಧಿಸಿದ ಉಪನಿರ್ದೇಶಕರ ಕಛೇರಿಗೆ ಹಾಜರಾಗತಕ್ಕದ್ದು.
2. ಶಿಕ್ಷಕರು ಕೌನ್ಸಿಲಿಂಗ್‌ಗೆ ಹಾಜರಾಗುವಾಗ ತಮ್ಮ ಭಾವಚಿತ್ರವಿರುವ ಗುರುತಿನ ಚೀಟಿಯೊಂದಿಗೆ ಹಾಜರಾಗುವುದು.
3. ವರ್ಗಾವಣೆ ಅರ್ಜಿಯಲ್ಲಿ ಕೋರಿರುವ ಆಧ್ಯತೆಗೆ ಸಂಬಂಧಿಸಿದಂತೆ ಪೂರಕ ಮೂಲ ದಾಖಲೆಗಳು.
4. ಪರಸ್ಪರ ವರ್ಗವಣೆಯ ಪೂರಕ ದಾಖಲೆಗಳು
5. ಕೋವಿಡ್-19 ನಿಯಮಗಳನ್ನು ಪಾಲಿಸಿ ಕಡ್ಡಾಯವಾಗಿ ಮಾಸ್ಕ್ ಧರಿಸಿ ಕೌನ್ಸಿಲಿಂಗ್‌ಗೆ ಹಾಜರಾಗುವುದು.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

ನಿರ್ದೇಶಕರು (ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ.
3. ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ. ಬೆಳಗಾವಿ ವಿಭಾಗ.
4. ಸಹ ನಿರ್ದೇಶಕರು ಹಾಗೂ ವಿಶೇಷಾಧಿಕಾರಿಗಳು, ಬೆಂಗಳೂರು ವಿಭಾಗ ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ.ರಸ್ತೆ, ಬೆಂಗಳೂರು ರವರಿಗೆ ರವಾನಿಸುತ್ತಾ ಈ ಕಛೇರಿಯ ಪತ್ರದ ಸಮ ಸಂಖ್ಯೆ ದಿನಾಂಕ:14-01-2022 ರಂತೆ ಕ್ರಮ ವಹಿಸಲು ತಿಳಿಸಿದೆ.
5. ನಿರ್ದೇಶಕರು(ಇತರೆ ಪರೀಕ್ಷೆಗಳು) ಹಾಗೂ ವರ್ಗಾವಣೆ ಕೋಶ ಪ್ರಕ್ರಿಯೆ ನಿಯಂತ್ರಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು .
6. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ ಹಾಗೂ ವೇಳಾಪಟ್ಟಿಯನ್ನು ತಮ್ಮ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಹಾಗೂ ಸಂಬಂಧಿಸಿದ ಶಿಕ್ಷಕರಿಗೆ ಮಾಹಿತಿಯನ್ನು ನೀಡಲು ಕ್ರಮವಹಿಸುವುದು.
7. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
8. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಕಳುಹಿಸುತ್ತಾ ವೇಳಾಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
9. ಕಛೇರಿ ಪ್ರತಿ.